**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ರಾಣೇಬೆನ್ನೂರು.**

**C.C No.3378/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಸುರೇಶ ಯಳ್ಳೂರು | ***P.W-8*** |
| ತಂದೆಯ ಹೆಸರು | : ಹನುಮಂತಪ್ಪ | ***C.W-12*** |
| ವಯಸ್ಸು | : 46 ವರ್ಷ | |
| ಉದ್ಯೋಗ | : ಪಿಐ, ವಿಜಿಲೆನ್ಸ್, ಗದಗ | |
| ವಾಸ | : ಗದಗ | |

**ದಿನಾಂಕಃ 17-09-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸರ್ಕಾರಿ ಸಹಾಯಕ ಅಭಿಯೋಜಕರವರಿಂದಃ**

ನಾನು ದಿನಾಂಕ 04-09-2013 ರಿಂದ ದಿನಾಂಕ 05-05-2015 ರವರಗೆ ರಾಣೆಬೆನ್ನೂರು ಶಹರ ಪೋಲಿಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 03-12-2013 ರಂದು ನಾನು ಚಾಸಾ-11 ಇವರಿಂದ ಕಡತವನ್ನು ಪಡೆದು ದಾಖಲಾತಿಗಳನ್ನು ಪರಿಶೀಲನೆ ಮಾಡಿರುತ್ತೇನೆ. ಅದೇ ದಿನ ಘಟನಾ ಸ್ಥಳಕ್ಕೆ ಭೇಟಿ ನೀಡಿ ಚಾಸಾ-2 ಮತ್ತು 3 ಇವರ ಸಮಕ್ಷಮ ಬೆಳಿಗ್ಗೆ 10 – 11 ಗಂಟೆಯವರೆಗೆ ಫಿರ್ಯಾದಿಯ ತಾಯಿಯ ಮನೆ ಮುಂದೆ ಅವಳು ತೋರಿಸಿದ ಸ್ಥಳದಲ್ಲಿ ಪಂಚನಾಮೆ ಕೈಗೊಂಡಿರುತ್ತೇನೆ. ಸಾಕ್ಷಿ ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ನಂತರ ಸಾಕ್ಷಿದಾರರಾದ ಚಾಸಾ-4 ರಿಂದ 10 ಇವರ ಹೇಳಿಕೆ ಪಡೆದಿರುತ್ತೇನೆ. ಚಾಸಾ-1 ಇವರ ಕಡೆಯಿಂದ ಮದುವೆ ಆಮಂತ್ರಣ ಪತ್ರಿಕೆಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಮದುವೆ ಆಮಂತ್ರಣ ಪತ್ರಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ವರ್ಗಾವಣೆಯ ಪ್ರಯುಕ್ತ ಸದ್ರಿ ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-13 ಇವರಿಗೆ ಕಡತವನ್ನು ನಿವೇದಿಸಿಕೊಂಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಸದ್ರಿ ಯಾವುದೇ ಘಟನೆ ನಡೆದಿಲ್ಲ ಕಾರಣ ನಾನು ನಿಪಿ-2 ರಂತೆ ಘಟನಾ ಸ್ಥಳಕ್ಕೆ ಹೋಗಿ ಚಾಸಾ-2 3 ಇವರ ಸಮಕ್ಷಮ ಪಂಚನಾಮೆ ಕೈಗೊಂಡಿಲ್ಲ ಎಂದರೆ ಸರಿ ಅಲ್ಲ. ಪಂಚನಾಮೆ ಮಾಡುವ ಸಮಯದಲ್ಲಿ ಅಕ್ಕಪಕ್ಕದಲ್ಲಿ ಬಹಳಷ್ಟು ಜನ ಇದ್ದರು ಆದಾಗ್ಯೂ ಸಹ ಅವರ ಹೇಳಿಕೆ ಪಡೆದಿಲ್ಲ ಎಂದರೆ ಅವರು ಹೇಳಿಕೆ ಕೊಡಲು ಮುಂದೆ ಬರಲಿಲ್ಲ. ಸದ್ರಿ ಘಟನಾ ಸ್ಥಳದಲ್ಲಿದ್ದ ಅಕ್ಕಪಕ್ಕದವರನ್ನು ಪಂಚರನ್ನಾಗಿ ಪಡೆಯಬಹುದಿತ್ತು ಎಂದರೆ ಅವರು ಸಹಕರಿಸಿಲ್ಲ ಎಂದು ಹೇಳುತ್ತಾರೆ. ಸದ್ರಿ ಅವರು ಸಿದ್ಧರಿದ್ದರೂ ಕೂಡ ನಾನು ಉದ್ದೇಶಪೂರ್ವಕವಾಗಿ ಪಡೆದಿಲ್ಲ ಎಂದರೆ ಸರಿ ಅಲ್ಲ. ಪಂಚನಾಮೆಯನ್ನು ನಾನು ಕ್ರಮಬದ್ಧವಾಗಿ ಜರುಗಿಸಿಲ್ಲ ಎಂದರೆ ಸರಿ ಅಲ್ಲ. ಪಂಚನಾಮೆಯನ್ನು ಆ ಸಮಯದಲ್ಲಿ ತಯಾರಿಸಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ನಾನು ಯಾವುದೇ ಘಟನೆಯಾಗದೇ ಇದ್ದರೂ ಸಹ ಸುಳ್ಳು ಹೇಳಿಕೆ ಕೊಡಲು ಕಡತಕ್ಕೆ ಅಳವಡಿಸಿರುತ್ತೇನೆ ಎಂದರೆ ಸರಿ ಅಲ್ಲ. ಘಟನೆಗೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ ಅಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.